

**ಬದಲು**

ಗುಂಡ: ನೀನು ಇತ್ತೀಚೆಗೆ ತುಂಬ ಬದಲಾಗಿದ್ದಿಯಾ ಕಣೆ. ಮೊದಲಿನ ಹಾಗಿಲ್ಲ.

ಪದ್ದಿ: ಸ್ವಲ್ಪ ದಿನ ತಡಿ. ಬ್ಯೂಟಿ ಪಾರ್ಲರ್ ಪ್ರಾರಂಭ ಆಗಲಿ ಮೊದಲಿನ ಹಾಗೆ ಆಗ್ತೀನಿ.

**ಮದುವೆ**

ಗುಂಡ: ನನ್ನ ಗೆಳೆಯನಿಗೆ ಮೊದಲು ಚಮಚ ತೊಳೆಯುವದಕ್ಕೂ ಬರುತ್ತಿರಲಿಲ್ಲ. ಅದಕ್ಕೇ ಮದುವೆಯಾಗು ಸರಿಯಾಗುತ್ತೆ ಅಂತ ಹೇಳಿದ್ದೆ.
ತಿಮ್ಮ: ಈಗ ಅವನಿಗೆ ಚಮಚ ತೊಳೆಯಲು ಬರುತ್ತಾ?
ಗುಂಡ: ಈಗ ಅವನು ಪಾತ್ರೆ, ಬಟ್ಟೆಗಳನ್ನೆಲ್ಲಾ ತೊಳೆಯುತ್ತಾನೆ ಅಂದ್ರೆ ನಂಬಲೂ ಆಗುತ್ತಿಲ್ಲ.

**ಕಾರಣ**

ಗುಂಡ: ಇತ್ತೀಚಿಗೆ ಹುಡುಗರು ತಮ್ಮ ತಂದೆಯ ಫೋನ್ ಬಂದರೆ ಇಪ್ಪತ್ತು ಸೆಕೆಂಡ್ ನಂತರ ತೆಗೆದುಕೊಳ್ತಾರೆ.
ತಿಮ್ಮ: ಹೌದಾ? ಯಾಕೆ ಹಾಗೆ?
ಗುಂಡ: ಏಕೆಂದರೆ ಮೊಬೈಲ್ ಅವರ ಕೈಯಲ್ಲೇ ಇತ್ತು ಅಂತ ಅವರ ತಂದೆಗೆ ಗೊತ್ತಾಗಬಾರದಲ್ಲ ಅಂತ.

**ಮಾಡಿಕೊಳ್ತಿವಿ**

ಗುಂಡ: ನಾಲ್ಕು ಪ್ಯಾಕೆಟ್ ನೂಡಲ್ಸ್ ಕೊಡಿ.
ತಿಮ್ಮ: ಎರಡು ನಿಮಿಷ.
ಗುಂಡ: ನೀವು ಇಲ್ಲೇ ತಯಾರಿ ಮಾಡಿ ಕೊಡಬೇಕಿಲ್ಲ. ಪ್ಯಾಕೆಟ್ ಕೊಟ್ಟರೆ ನಾವೇ ಮಾಡಿಕೊಳ್ಳುತ್ತೇವೆ.

**ಅಸಾಧ್ಯ**

ಪದ್ದಿ: ರೀ, ರಾಮರಾಜ್ಯದಲ್ಲಿ ಹುಲಿ, ಮೇಕೆ ಒಂದೇ ನದಿಯ ದಡದಲ್ಲಿ ನೀರು ಕುಡಿದು ಬದುಕುತಿದ್ದವಂತೆ. ಅದು ಹೇಗೆ ಸಾಧ್ಯ?
ಗುಂಡ: ಯಾಕೆ ಅಸಾಧ್ಯ? ಈಗ ನಾನು ನಿನ್ನ ಜೊತೆ ಬದುಕುತ್ತಿಲ್ಲವಾ?

**ಕೊಬ್ಬು**

ಗುಂಡ: ಕೊಬ್ಬು ಜಿಮ್ಮಿನಲ್ಲಿ ಅಷ್ಟೇ ಕರಗುವದಿಲ್ಲ.
ತಿಮ್ಮ: ಮತ್ತೆ ಇನ್ನೆಲ್ಲಿ ಕರಗುತ್ತದೆ?
ಗುಂಡ: ಜೇಬಿನಲ್ಲಿ ದುಡ್ಡಿಲ್ಲದಿದ್ದರೂ ಕರಗುತ್ತದೆ.

**ಸೆಟ್**

ಗುಂಡ: ಒಂದು ದೊಡ್ಡ ಪ್ರಶ್ನೆ ನನ್ನನ್ನು ಕಾಡುತ್ತಿದೆ.
ತಿಮ್ಮ: ಏನು ಅಂಥ ಪ್ರಶ್ನೆ?
ಗುಂಡ: ಈ ವಾಚ್ ಅನ್ನು ಮೊದಲು ಕಂಡು ಹಿಡಿದವನು ಹೇಗೆ ಟೈಮ್ ಸೆಟ್ ಮಾಡಿದ ಅಂತ.

**ಕನಸು**

ಗುಂಡ: ನಿನ್ನೆ ನೂಡಲ್ಸ್ ತಿಂದಂತೆ ಕನಸು ಬಿತ್ತು.
ತಿಮ್ಮ: ಆಮೇಲೆ ಏನಾಯ್ತು?
ಗುಂಡ: ಬೆಳಿಗ್ಗೆ ಎದ್ದು ನೋಡಿದರೆ ಪಕ್ಕದಲ್ಲಿಯೇ ಇಟ್ಟಿದ್ದ ಹೆಡ್‌ಫೋನ್ ಕಾಣಿಸುತ್ತಿರಲಿಲ್ಲ.

**ಪ್ರಮುಖ**

ತಿಮ್ಮ: ಮೊಬೈಲ್‌ಗಿಂತಲೂ ಪ್ರಮುಖ ವಸ್ತು ಯಾವುದು ಅಂತ ನಿನಗೆ ಅನ್ನಿಸುತ್ತಿದೆ?
ಗುಂಡ: ಮೊಬೈಲ್ ಚಾರ್ಜರ್ ಕಣೋ.

**ಸಾಲ**

ತಿಮ್ಮ: ನಿನ್ನ ಕಾಲರ್ ಟ್ಯೂನ್ ಚೆನ್ನಾಗಿದೆ. ಆದರೆ ಎಂದೂ ಪೂರ್ತಿ ಕೇಳಲು ಸಾಧ್ಯವಾಗುತ್ತಿಲ್ಲ.
ಗುಂಡ: ಸಾಲ ಕೊಟ್ಟು ನೋಡು. ಆಗ ಪೂರ್ತಿ ಕಾಲರ್ ಟ್ಯೂನ್ ಕೇಳುವ ಅವಕಾಶ ಸಿಗುತ್ತದೆ.

–ಭೋಜರಾಜ ಸೊಪ್ಪಿಮಠ, ಮಂಡಲಗಿರಿ

ದೀಪು: ಅಜ್ಜೀ, ಇಲ್ಲಿ ನೋಡು ಅಪ್ಪ 4ಜಿ ಮೊಬೈಲ್ ಅಕ್ಕನಿಗೆಂದು ತಂದಿದ್ದಾರೆ. ನಿನ್ನ ಎಪ್ಪತ್ತನೇ ವರುಷದ ಹುಟ್ಟು ಹಬ್ಬಕ್ಕೆಂದು ನಿನಗೆ 5ಜಿ ಮೊಬೈಲ್ ತಂದುಕೊಡ್ತಾರಂತೆ.
ಅಜ್ಜಿ: ಅಯ್ಯೋ, ನನಗೆ ಕಿವಿಬೇರೆ ಸರಿಯಾಗಿ ಕೇಳೊಲ್ಲ, ನನಗೆ ಯಾಕಪ್ಪಾ ಐದು ಕೇಜಿ ಫೋನು ಅಷ್ಟೊಂದು ಭಾರ ಎತ್ತುವ ಶಕ್ತಿ ಈಗಿಲ್ಲ ಮರಿ...

***

ಅಮ್ಮ: ದೀಪೂ, ಸ್ನಾನ ಆಯಿತಾ?, ನೋಡು ಯಾರೋ ಬೆಲ್ ಮಾಡ್ತಿದಾರೆ
ದೀಪು: ಅಮ್ಮ ಕೊರಿಯರ್ ಬಂದಿದೆ, ಚಪ್ಪಲಿಗೆ ಆರ್ಡರ್ ಮಾಡಿದ್ದಾ?
ಅಮ್ಮ: ಮಾಡಿದ್ದೆ. ಸರಿ, ಇಡು ಪೂಜೆ ಮಾಡಿ ಆಮೇಲೆ ನೋಡ್ತೀನಿ.
ದೀಪು: ಏನೂ ಚಪ್ಪಲಿ ಪೂಜೆ ಮಾಡ್ತೀಯಾ?
ಅಮ್ಮ: ಅಲ್ಲಾ ಕಣೋ, ದೇವರ ಪೂಜೆ ಮಾಡಿದ ಮೇಲೆ ನೋಡ್ತೀನಿ ಅಂದೆ.

***

ಟೀಚರ್: ಹಬ್ಬಕ್ಕೆ ಮನೇಲಿ ಪ್ರಸಾದ ಏನು?
ಮಕ್ಕಳು: ಅಮ್ಮ ತಂಬಿಟ್ಟು ಮಾಡಿದ್ದಾರೆ.
ಗುಂಡ: ಮೇಡಂ, ನಮ್ಮ ಮನೆಯಲ್ಲಿ ನಾನೇ ತಂಬಿಟ್ಟು ಮಾಡಿದೆ.
ಮೇಡಂ: ಗುಡ್, ಹೇಗೆ ಮಾಡಿದೆ ಹೇಳು?
ಗುಂಡ: ಹಿಟ್ಟಿನಲ್ಲಿ ತಮ್ ಇಟ್ಟು ಉಂಡೆ ಮಾಡಿದರೆ ತಂಬಿಟ್ಟು ಆಗುತ್ತೆ!

–ಸುಮನಾ


